# ಮಿತ್ರಾ ವೆಂಕಟ್ರಾಜ



ಉಡುಪಿ ಜಿಲ್ಲೆಯ ಕುಂದಾಪುರದವರಾದ ಮಿತ್ರಾ ವೆಂಕಟ್ರಾಜ್ ಅವರು ಸದ್ಯ ನೆಲಸಿರುವುದು ಮುಂಬಯಿಯಲ್ಲಿ. ಕನ್ನಡದ ಉತ್ತಮ ಸಣ್ಣ ಕಥಾ ಲೇಖಕಿ. ಮಿತ್ರಾ, 'ರುಕುಮಾಯಿ', 'ಹಕ್ಕಿ ಮತ್ತು ಅವಳು' ಮತ್ತು 'ಮಾಯಕದ ಸತ್ಯ' ಎಂಬ ಮೂರು ಕಥಾಸಂಕಲನಗಳನ್ನೂ, 'ಪಾಚಿ ಕಟ್ಟಿದ ಪಾಗಾರ' ಎಂಬ ಕಾದಂಬರಿಯನ್ನೂ ಪ್ರಕಟಿಸಿದ್ದಾರೆ. ಈ ಕಾದಂಬರಿಯನ್ನು ಅವರ ಪತಿ ವೆಂಕಟ್ರಾಜ್ ರಾವ್ ಇಂಗ್ಲಿಷಿಗೆ ಭಾಷಾಂತರಿಸಿದ್ದು, ಅದು 'A Warped Space' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಹಾಗೆಯೇ ಇಂಗ್ಲಿಷಿಗೆ ಅನುವಾದಗೊಂಡ ಇವರ ಕೆಲವು ಸಣ್ಣಕತೆಗಳು 'White Chiffon Sari' ಎಂಬ ಹೆಸರಿನ ಸಂಕಲನದಲ್ಲಿ ಪ್ರಕಟಗೊಂಡಿವೆ.

ಮಾನವೀಯ ಸಂಬಂಧಗಳನ್ನು ಎಲ್ಲ ಸಂಕೀರ್ಣತೆಗಳೊಂದಿಗೆ ಸೂಕ್ಷ್ಮವಾಗಿ, ಮನಸ್ಸಿಗೆ ತಟ್ಟುವಂತೆ ಬರೆಯಬಲ್ಲ ಮಿತ್ರಾ ಅವರ ಕತೆಗಳಲ್ಲಿ ಬದುಕಿನ ಏಳುಬೀಳುಗಳ ಬಗೆಗಿನ ಅನುಭೂತಿ ಅವಲೋಕನಗಳಿವೆ. ಕಣ್ಣಿಗೆ ಕಟ್ಟುವ ಪಾತ್ರ ಚಿತ್ರಣ, ತಿಳಿಹಾಸ್ಯದ ಲೇಪ, ಲವಲವಿಕೆಯ ವಿವರಣೆ, ಕಾಲದೇಶಗಳನ್ನು ಹಿಡಿದಿಡುವ ಪರಿ – ಇವು ಮಿತ್ರಾರ ಬರಹಗಳಲ್ಲಿ ಎದ್ದು ಕಾಣುವ ಅಂಶಗಳು.

ಭಾವನಾತ್ಮಕವಾದ ಈ ಬೆಳವಣಿಗೆಯಲ್ಲಿ ಸಾಮಾಜಿಕ ಆಯಾಮವೂ ಇದೆ. ಕತೆ ಬರೆದ ಕಾಲದಲ್ಲಿ ಗೃಹಿಣಿಯಾಗಿಯಷ್ಟೇ ಅಲ್ಲದೆ, ಹೊರಪ್ರಪಂಚದಲ್ಲೂ ಹೆಣ್ಣು ತನ್ನ ನೆಲೆಯನ್ನು ಕಂಡುಕೊಳ್ಳಲು ತೊಡಗಿದ್ದಳಷ್ಟೆ. ನಮ್ಮ ಅಮ್ಮ ಅಜ್ಜಿಯರ ಕಾಲದಲ್ಲಿಲ್ಲದ ಸೌಲಭ್ಯ–ಅವಕಾಶಗಳು ನಮ್ಮ ತಲೆಮಾರಿಗಿದ್ದುವು.

ಬರೆಯಲಾಗದ, ಬರೆಯದೆ ಉಳಿದ ಎಷ್ಟೋ ಕತೆಗಳು ಒಳಗಿಂದ ಇದ್ದೇ ಇವೆ. 'ಒಂದು ಒಸಗೆ ಒಯ್ಯುವುದಿತ್ತು' ಬಹಳ ಕಾಲದಿಂದ ನನ್ನೊಳಗೆ ಸುಳಿದಾಡುತ್ತಿದ್ದ ಕತೆ. ಕೋಮಲವಾದ ಅಲ್ಲಿನ ಸಂವೇದನೆಗಳು ಸ್ವಲ್ಪವೂ ಕೆಡದಂತೆ, ಅತ್ಯಂತ ನಾಜೂಕಾಗಿ ಕತೆಯನ್ನು ನಿರ್ವಹಿಸಬೇಕಿತ್ತು. ಕೆಲವು ಬಾರಿ ಈ ಕತೆಯನ್ನು ಬರೆಯಲು ಪ್ರಯತ್ನಿಸಿ ಕೈಬಿಟ್ಟಿದ್ದೆ. ಆಗ ತಕ್ಕುದಾದ ಪ್ರಬುದ್ಧತೆ ನನ್ನೊಳಗೆ ಇರಲಿಲ್ಲವೋ, ಅಥವಾ ಕಥಾ ವಸ್ತುವಿನಿಂದ ದೂರ ನಿಂತು ಬರೆಯುವುದು ನನ್ನಿಂದಾಗದೆ ಹೋಯಿತೋ ತಿಳಿಯದು. ವೈವಾಹಿಕ ಜೀವನದಲ್ಲಿ ಪ್ರೇಮವಿಲ್ಲದಿದ್ದರೂ ಚಿಂತಿಲ್ಲ, ಆದರೆ ವಿವಾಹಬಾಹಿರ ಸಂಬಂಧದ ಬಗ್ಗೆ ಮಾತ್ರ ಸಮಾಜಕ್ಕೆ ವಿಪರೀತ 'ಮಡಿವಂತಿಕೆ', ಸಹಜವಾಗಿ ಹುಟ್ಟಿದ ಪ್ರೀತಿಯೇ ಆದರೂ, ಎಷ್ಟೇ ಗಾಢವಾದ ಒಡನಾಟವೇ ಆದರೂ, ಅದು ಮಹಾಪಾಪ! ಇಡೀ ಕತೆಯನ್ನು ಸಣ್ಣ ಹುಡುಗಿಯೊಬ್ಬಳ ದೃಷ್ಟಿಯಲ್ಲಿ ಹೆಣೆಯುತ್ತ ಹೋದೆ. ಕತೆಗೆ ಸರಿಯಾದ ಹಿನ್ನೆಲೆ ಬೇಕಿತ್ತು ಶಿಥಿಲಗೊಂಡ ಹಳೆಯ 'ಕಂಬದ ಮನೆ'ಯ ಯೋಚನೆ ಹೊಳೆಯಿತು. ಜಲಜ ಚಿಕ್ಕಿ ಮತ್ತು ಚಿಕ್ಕಪ್ಪಯ್ಯನನ್ನು ಹಚ್ಚಿಕೊಂಡ